converted into a General Hospital under the Second Five-Year Plan ;

(*f*) whether there is any proposal to sanction a dispensary at Bewoor in Channapatna taluk during 1957-58 ?

A.—Sri R. M. PATIL (Minister for Health).—

(*a*) About 63 years ago.
(*b*) Information not available.
(*c*) 30,000 ... Town.
1,30,000 ... Taluk.
(*d*) One.
(*e*) There are no such proposals under consideration at present.
(*f*) Proposals are under consideration of Government.

Scheme under Sarvodaya Organisation in the State.

Q.—691. Sri N. O. SAMAJI (Belgaum II).—

Will the Government be pleased to state :—

(*a*) the number of Sarvodaya Schemes and the places in the State where they are undertaken ;

(*b*) whether a printed report of the Sarvodaya Schemes is published by them ;

(*c*) whether any arrangements to supervise the work started under the said Schemes has been made by them ;

(*d*) if so, what they are ?

A.—Sri S. NIJALINGAPPA (Chief Minister).—

(*a*) One.
The Sarvodaya Scheme is undertaken in the following four places :

1. Belgaum Taluka in Belgaum District.
2. Dharwar Taluka in Dharwar District.
3. Bagalkot Taluka in Bijapur District.
4. Ankola Taluka in North Kanara District.

(*b*) Yes.
(*c*) Yes.
(*d*) The Sanchalak exercises supervision over the constructional works through his paid staff of overseer and gramsevaks. The overseer is mainly responsible for supervision of the constructional works. On completion of the works, the Completion Certificates are obtained from the Public Works Dapartment. The accounts of the scheme are subject to quarterly audit by the Departmental Auditor specially appointed for the purpose. In addition to this, the accounts are also audited by the Accountant General.

N. E. S. for Heggadadevanakote Taluk.

Q.—1225. Sri N. RACHIAH (Hunsur).—

Will the Government be pleased to state:—

(*a*) whether they are aware that Heggadadevanakote Taluk in Mysore District is the most backward area ;

(*b*) if so, the reasons for not introducing N.E.S. Scheme in the said Taluk;

(*c*) whether representations are made by the people of this Taluk in this behalf ?

A.— Sri S. NIJALINGAPPA (Chief Minister).—

(*a*) Heggadadevanakote Taluk is one of the backward areas.

(*b*) It is proposed to introduce the N.E.S. Scheme to all the uncovered areas by stages during the Second Plan Period.

(*c*) No.

MADRAS DISTRICT BOARDS (MYSORE AMENDMENT) BILL, 1958.

Motion to consider—(contd.)

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಮಾನ್ಯ ಸಭಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಬೋರ್ಡ್ ಅವಧಿಯನ್ನು ವಿಸ್ತರಣೆಮಾಡುವ ಮಸೂದೆಯ ಮೇಲೆ ಮಾತನಾಡುತ್ತಾ ಜಿಲ್ಲಾ ಬೋರ್ಡ್ ಚುನಾವಣೆ ನಡೆಸುವುದಕ್ಕೆ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಹೆದರಿರುತ್ತದೆಂದು ವಿರೋಧಿ ಪಕ್ಷದ ಸದಸ್ಯರು ಹೇಳಿದರು; ಮತ್ತು ಚುನಾವಣೆ ನಡೆಸಿದರೆ ಅಧಿಕಾರ ತಮ್ಮ ಕೈಬಿಟ್ಟು ಹೋಗುತ್ತದೆಂಬ ಭಯದಿಂದ ಕಾಂಗ್ರೆಸ್ ಪಕ್ಷ ನಿಧಾನವಾಗಿ ಹೆಜ್ಜೆ ಇಡುತ್ತಿದೆಯೆಂದೂ, ಚುನಾವಣೆ

(ಶ್ರೀ ಕೆ. ಪುಟ್ಟಸ್ವಾಮಿ)

ಗಳನ್ನು ಮುಂದೂಡುತ್ತಿದೆಯೆಂದೂ ವಾದ ಮಾಡಿದರು. ವಿರೋಧ ಪಕ್ಷದವರ ಈ ವಾದವನ್ನು ಐದಾರು ವರ್ಷಗಳಿಂದ ನಾವು ಕೇಳುತ್ತಲೇ ಇದ್ದೇವೆ. 1952 ರಿಂದ 1957ರ ವರೆಗೆ ಅದೊಂದೇ ವಾದವನ್ನು ನಾವು ಕೇಳುತ್ತಿದ್ದೇವೆ. ಕಾಂಗ್ರೆಸ್ಸು ಚುನಾವಣೆಗೆ ಹೆದರಿರುತ್ತದೆ, ಮತದಾರರ ಬೆಂಬಲ ಕಾಂಗ್ರೆಸ್ಸಿಗೆ ಇಲ್ಲ, ಚುನಾವಣೆಗೆ ಹೆದರಿ ಚುನಾವಣೆ ನಡೆಸದೆ ಜಿಲ್ಲಾ ಬೋರ್ಡುಗಳಿಗೆ ನಾಮಕರಣಮಾಡಿ ಅಧಿಕಾರಿಗಳ ಮೂಲಕ ಕೆಲಸಮಾಡುತ್ತಿದ್ದಾರೆಂದು ಅವರು ಹೇಳಿದರು. ಈಗಾಗಲೇ ನಡೆದ ಎರಡು ಮಹಾ ಚುನಾವಣೆಗಳಲ್ಲಿ ಆದ ಫಲಿತಾಂಶದಿಂದ ಕಾಂಗ್ರೆಸ್ಸಿಗೆ ಇರುವ ಬೆಂಬಲವೆಷ್ಟು ವಿರೋಧ ಪಕ್ಷದವರಿಗೆ ಇರುವ ಬೆಂಬಲವೆಷ್ಟು ಎಂಬುದನ್ನು ವಿವರವಾಗಿ ನಾನು ಈಗ ಹೇಳಬೇಕಾಗಿಲ್ಲ. ಈ ಸಭೆಯಲ್ಲಿರುವ ನಮ್ಮ ಕಾಂಗ್ರೆಸ್ ಪಕ್ಷದ ಮತ್ತು ವಿರೋಧ ಪಕ್ಷದ ಸಂಖ್ಯಾಬಲವೇ ಅದಕ್ಕೆ ಸಾಕ್ಷಿಯಾಗಿದೆ. ಈ ಸಭೆಯಲ್ಲಿ ಯಾವ ವಿಚಾರ ಬಂದರೂ, ನಾವು ಬಹುಸಂಖ್ಯೆಯಲ್ಲಿ ಇದ್ದೇವೆ, ಸಭೆಯಲ್ಲಿ ಅನುಮತಿ ಪಡೆಯುತ್ತೇವೆ, ಇಷ್ಟಬಂದ ರೀತಿಯಲ್ಲಿ ವರ್ತಿಸುತ್ತಿದ್ದೇವೆ, ಬೇಕಾದ್ದನ್ನು ಮಾಡುತ್ತೇವೆ ಎಂದು ಟೀಕಿಸಿದರು. ವಿರೋಧ ಪಕ್ಷದ ಸದಸ್ಯರಿಗೆ ಜನಗಳ ಬೆಂಬಲವಿಲ್ಲದೆ, ಒಂದು ನಿರ್ದಿಷ್ಟ ನೀತಿಯನ್ನು ಅನುಸರಿಸದೆ, ಕಾಂಗ್ರೆಸ್ ಪಕ್ಷದ ಪ್ರತಿಯೊಂದು ಕಾರ್ಯಕ್ಕೂ ಹಾಗೆ ಮಾಡಬೇಕಾಗಿತ್ತು, ಹೀಗೆ ಮಾಡಬೇಕಾಗಿತ್ತು ಎಂದು ವಿನಾಕಾರಣ ಟೀಕಿಸುತ್ತಾರೆಯೇ ವಿನಾ ಯಾವ ಒಂದು ರಚನಾತ್ಮಕ ಸಲಹೆಯನ್ನೂ ಒಬ್ಬ ಸದಸ್ಯನಾದರೂ ಇಲ್ಲಿಯವರೆಗೆ ಕೊಟ್ಟಿಲ್ಲ. ಈಗ ನಮ್ಮ ಮುಂದಿರುವ ಮಹತ್ವದ ಕಾರ್ಯವೆಂದರೆ ದೇಶದಲ್ಲಿಯ ಪರಿಸ್ಥಿತಿಯನ್ನು ಪರಿಶೀಲನೆ ಮಾಡಬೇಕು. ಪ್ರಜಾ ಪ್ರಭುತ್ವ ಆಡಳಿತ ಕೇಂದ್ರೀಕೃತವಾಗಿದೆ. ಸಣ್ಣ ಸಣ್ಣ ಸ್ಥಳೀಯ ಸಂಸ್ಥೆಗಳಿಗೆ ಈ ಅಧಿಕಾರವನ್ನು ಹಂಚಿ ಕೊಡಬೇಕೆಂಬ ನೀತಿಯನ್ನು ಸರಕಾರ ಒಪ್ಪಿಕೊಂಡಿದೆ. ಅದನ್ನು ಪರಿಶೀಲಿಸಲು ಒಂದಲ್ಲ ಹತ್ತು ಸಮಿತಿಗಳನ್ನು ಸರಕಾರ ನೇಮಿಸಿದೆ. ಅಂಥ ಸಮಿತಿಗಳ ವರದಿಗಳು ನಮ್ಮ ಮುಂದೆ ಈಗ ಇವೆ. ನವಂಬರ 1957ರಲ್ಲಿ ಒಂದು ರಿಪೋರ್ಟು ಬಂದಿದೆ. ನಿಧಾನ ಮಾಡದೆ ಒಂದು ನಿಶ್ಚಿತವಾದ ಕ್ರಮವನ್ನು ನಾವು ಅನುಸರಿಸುತ್ತಿದ್ದೇವೆ. ಇಂಡಿಯಾ ದೇಶದಲ್ಲಿ ಸ್ಥಳೀಯ ಸಂಸ್ಥೆಗಳು ಯಾವ ರೀತಿಯಾಗಿ ಇರಬೇಕು, ಕಾರ್ಯ ವಿನ್ಯಾಸ ಹೇಗಿರಬೇಕು ಎಂಬುದನ್ನು ಈ ವರದಿಯಲ್ಲಿ ನಮೂದಿಸಲಾಗಿದೆ. ಈ ವರದಿಯನ್ನು ಸದಸ್ಯರಿಗೆ ಕೊಡಲಾಗಿದೆ. ಜಿಲ್ಲಾ ಬೋರ್ಡುಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವದಕ್ಕೆ ಹಣ ಸಾಲದು. ಹಾಗೂ ಹೆಚ್ಚು ವಿಸ್ತಾರವಾದ ಪ್ರದೇಶಗಳಲ್ಲಿ ಆಡಳಿತ ನಡೆಸಬೇಕಾಗಿರುವದರಿಂದ ಹಣವನ್ನು ಒದಗಿಸುವದಕ್ಕೆ ಸಂಸ್ಥೆಗಳಿಗೆ ಆಗುವದಿಲ್ಲ. ಆದ್ದರಿಂದ ಚಿಕ್ಕ ಚಿಕ್ಕ ಸಂಸ್ಥೆಗಳನ್ನು ಮಾಡಬೇಕು. ಗ್ರಾಮಪಂಚಾಯಿತಿಗಳನ್ನು ಏರ್ಪಡಿಸಬೇಕು. ರಾಷ್ಟ್ರೀಯ ವಿನ್ಯಾಸ ಯೋಜನೆಯ ಬ್ಲಾಕ್ ಆಧಾರವಾಗಿಟ್ಟುಕೊಂಡು ಪಂಚಾಯಿತಿ ಸಮಿತಿಗಳನ್ನು ಏರ್ಪಡಿಸಿ ಹೆಚ್ಚು ಹಣವನ್ನು ಅವುಗಳಿಗೆ ಒದಗಿಸಿ ಕೊಟ್ಟು ಪಂಚಾಯಿತಿ ಸಮಿತಿಗಳ ಮೂಲಕ ಕೆಲಸಕಾರ್ಯಗಳನ್ನು ನಡೆಸಬೇಕು ಎಂದು ಈ ವರದಿಯಲ್ಲಿ ಉಲ್ಲೇಖಿತವಾಗಿದೆ. ಸರಕಾರದವರು ಈ ವರದಿಯನ್ನು ಆಧಾರವಾಗಿಟ್ಟುಕೊಂಡು ಒಂದು ಕರಡು ಮಸೂದೆಯನ್ನು ತಯಾರು ಮಾಡಿ ನಮ್ಮ ಮುಂದೆ ಈ ಅಸೆಂಬ್ಲಿಯಲ್ಲಿ ಇಡುತ್ತಾರೆ ಎಂಬುದಾಗಿ ಭರವಸೆ ಕೊಟ್ಟಿದ್ದಾರೆ.

ವಿಶಾಲ ಮೈಸೂರು ರಾಜ್ಯ ರಚನೆಯಾದ ಮೇಲೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿ ಜಿಲ್ಲಾ ಬೋರ್ಡುಗಳ ಆಡಳಿತೆಯು ನಡೆಯುತ್ತಿದೆ. ಹಳೇ ಮೈಸೂರು ಭಾಗದಲ್ಲಿ ನ್ಯೂಕ್ಲಿಯಸ್ ಬೋರ್ಡು ನ್ಯೂಕ್ಲಿಯಸ್‌ಗಳನ್ನು ನಡೆಸುತ್ತಿತ್ತು. ಪ್ರಾಥಮಿಕ ಪಾಠ ಶಾಲೆಗಳನ್ನು ನಡೆಸುವುದು, ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿ ಸರಕಾರ ವಹಿಸಿಕೊಂಡು ಜಿಲ್ಲಾ ಬೋರ್ಡುಗಳನ್ನು ವಿಮುಕ್ತಮಾಡಲಾಗಿದೆ. ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಇವತ್ತಿಗೂ ಕೂಡ ವಿದ್ಯಾಭ್ಯಾಸವನ್ನು ನ್ಯೂಕ್ಲಿಯಸ್ ಬೋರ್ಡುಗಳ ಮೂಲಕ ಜಿಲ್ಲಾ ಬೋರ್ಡು ನಡೆಸುತ್ತಿದೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಜಿಲ್ಲಾ ಬೋರ್ಡುಗಳ ಕೆಲಸಕಾರ್ಯಗಳು ಪ್ರಜಾನತ್ರಾತ್ಮಕವಾಗಿ ಸರಿಯಾಗಿ ನಡೆಯುತ್ತಿಲ್ಲವೆಂದು ನಾನು ಕೇಳಿದ್ದೇನೆ. ಮದರಾಸ್ ಕರ್ನಾಟಕ ಭಾಗದಲ್ಲಿ 27ನೇ ಅಕ್ಟೋಬರ 1954ರಿಂದ ಚುನಾಯಿತ ಜಿಲ್ಲಾ ಬೋರ್ಡುಗಳು ನಡೆಯುತ್ತಾ ಇವೆ. ಜಿಲ್ಲಾ ಬೋರ್ಡುಗಳು ರಚಿತವಾಗಿ ಇನ್ನೂ ನಾಲ್ಕು ವರ್ಷ ಅವಧಿ ಮುಗಿದಿಲ್ಲ. ಈಗ ಆ ಜಿಲ್ಲಾ ಬೋರ್ಡಿಗೆ ಅಧಿಕಾರ ವಹಿಸಿಕೊಡುವುದಕ್ಕೆ ಈ ಮಸೂದೆಯನ್ನು ತಂದರೆ ಅದರಮೇಲೆ ಸಂಬಂಧಪಡದೆ ಇರುವುದನ್ನು ಚರ್ಚೆಮಾಡುವುದು ಅನವಶ್ಯಕ. ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ಅದಷ್ಟು ಶೀಘ್ರವಾಗಿ ಈ ಮಾನ್ಯ ಸಭೆಯಲ್ಲಿ ಮಂಡಿಸಲಾಗುವುದೆಂದು ಸರಕಾರದವರು ಭರವಸೆ ಕೊಟ್ಟಿದ್ದಾರೆ. ಅದಷ್ಟು ಜಾಗ್ರತೆ ಆ ಮಸೂದೆಯು ಸಭೆಯ ಮುಂದೆ ಚರ್ಚೆಗೆ ಬಂದು, ಇದೇ ಬಡ್ಜೆಟ್ ಅಧಿವೇಶನದಲ್ಲಿ ಪಾಸು ಆಗಿ ಕಾನೂನು ಆಗುತ್ತದೆಂದೂ ಮತ್ತು ಚುನಾವಣೆಗಳು ಸಹ ಜಾಗ್ರತೆ ನಡೆಯುತ್ತವೆಂದೂ ಆಶೆಯನ್ನು ವ್ಯಕ್ತಪಡಿಸಿ, ಈ ಮಸೂದೆಗೆ ನಾವು ನಮ್ಮ ಸಂಪೂರ್ಣ ಬೆಂಬಲ ಕೊಡುತ್ತೇವೆ.

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ನಮ್ಮ ಮುಂದೆ ಇಟ್ಟಿರತಕ್ಕಂಥ ಈ ಜಿಲ್ಲಾ ಬೋರ್ಡು ತಿದ್ದುಪಡಿ ಮಸೂದೆಯ ವಿಷಯದಲ್ಲಿ ಈಗಾಗಲೇ ನಮ್ಮ ಅನೇಕ ಮಾನ್ಯ ಮಿತ್ರರು ಮಾತನಾಡಿದ್ದಾರೆ. ಈ ಬಿಲ್ಲನ್ನು ಇಷ್ಟು ಜಾಗ್ರತೆ ಸರಕಾರದವರು ಈ ಸಭೆಯ ಮುಂದೆ ಏತಕ್ಕೆ ತರಬೇಕಾಗಿತ್ತು ಎಂಬುದನ್ನು ಸ್ವಲ್ಪ ಯೋಚನೆಮಾಡಬೇಕಾಗಿದೆ. ಇದೇ ಅಧಿವೇಶನದಲ್ಲಿ ಈ ಸಭೆಯಲ್ಲಿ ಜಿಲ್ಲಾ ಬೋರ್ಡುಗಳ ಒಂದು ಮಸೂದೆಯನ್ನು ತರುತ್ತೇವೆ ಎಂದು ಈಗಾಗಲೇ ನಮ್ಮ ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಜಿಲ್ಲಾ ಬೋರ್ಡು, ತಾಲ್ಲೂಕು ಬೋರ್ಡು ಮತ್ತು ಗ್ರಾಮಪಂಚಾಯಿತಿ ಮುಂತಾದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ಈ ಸಭೆಯ ಮುಂದೆ ಜಾಗ್ರತೆ ತಂದು ಅವಶ್ಯಕವಿರುವ ಮಾರ್ಪಾಟುಗಳನ್ನು ಮಾಡುತ್ತೇವೆಂದು ಅವರು ಹೇಳಿದರು.

ಈ ಮಧ್ಯೆ, ಮದರಾಸಿನಿಂದ ಬಂದಿರತಕ್ಕ ಭಾಗದ ಡಿಸ್ಟ್ರಿಕ್ಟ್ ಬೋರ್ಡ್‌ಗಳ ವಿಷಯದಲ್ಲಿ ಇನ್ನೂ ಕಾಲ ಮಿಂಚಿಲ್ಲ. ಅಷ್ಟರೊಳಗೆ ಒಂದು ಬಿಲ್ಲನ್ನು ತರುವುದಕ್ಕೆ ಅವಕಾಶವಿದೆ. ಈಗ ವಿಲೀನವಾಗಿರತಕ್ಕ ವಿಶಾಲ ಮೈಸೂರಿನಲ್ಲಿ ಪ್ರಜಾ ಸಂಸ್ಥೆಗಳ ವಿಷಯವನ್ನು ಪರಿಶೀಲಿಸಿ ನೋಡುವುದಾದರೆ ಅನೇಕ ಮುನಿಸಿಪಾಲಿಟಿಗಳಲ್ಲಿ, ಗ್ರಾಮಪಂಚಾಯಿತಿಗಳಲ್ಲಿ ಕಾರ್ಯಕಲಾಪಗಳು ಬಹಳ ಜಾಸ್ತಿಯಾಗಿ ಆಡಳಿತದ ಕಷ್ಟ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣ ಇಷ್ಟೆ. ಚುನಾಯಿತ ಸದಸ್ಯರು ಇಲ್ಲದಿರುವುದರಿಂದ ಜೊತೆಗೆ ಪೆಸಿಡೆಂಟರೂ

ಇಲ್ಲದಿರುವುದರಿಂದ ನೇರವಾಗಿ ಜಾಗ್ರತೆ ಕೆಲಸ ಕಾರ್ಯಗಳು ನಡೆಯುವುದಕ್ಕೆ ಅವಕಾಶವಿಲ್ಲ.

ಅಧ್ಯಕ್ಷರು.—ಈ ಮಸೂದೆ ಮದರಾಸ್ ಡಿಸ್ಟ್ರಿಕ್ಟ್ ನಿಂದ ಬಂದ ಭಾಗಗಳಿಗೆ ಸಂಬಂಧಪಟ್ಟದ್ದು. ಹಳೆಯ ಮೈಸೂರಿಗೆ ಸಂಬಂಧಪಟ್ಟಿಲ್ಲ. ಆದ್ದರಿಂದ ಇದರ ವಿಚಾರ ಮಾತನಾಡುವುದು ಬೇಡ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಕಾರಣದಿಂದ ನಮ್ಮ ಪ್ರಜಾಧಿಕಾರ ಸಂಸ್ಥೆಗಳ ಸಚಿವರು ಈ ಅಧಿವೇಶನ ಮುಗಿಯುವುದರೊಳಗೆ ಡಿಸ್ಟ್ರಿಕ್ಟ್ ಬೋರ್ಡ್ ಗಳನ್ನೆಲ್ಲಾ ಸಂಪೂರ್ಣವಾಗಿ ತೆಗೆದುಹಾಕಿ ತಾಲ್ಲೂಕ್ ಬೋರ್ಡ್, ಗ್ರಾಮಪಂಚಾಯಿತಿ ಆಕ್ಟನ್ನು ಜಾಗ್ರತೆ ತಂದರೆ ಈ ಸಮಸ್ಯೆಗಳೆಲ್ಲಾ ಬಗೆಹರಿಯುತ್ತವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಅಧಿವೇಶನ ಮುಗಿಯುವುದರೊಳಗೆ!

ಶ್ರೀ ಎಚ್. ಜಿ. ನರಸಿಂಹೇಗೌಡ.—ಹೌದು. ಆ ಬಿಲ್ಲನ್ನು ತನ್ನಿ. ನಿಜವಾಗಿಯೂ ನಾವು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಇಂಥ ಬಿಲ್ಲುಗಳು ಇನ್ನೂ ನಮ್ಮ ಮುಂದೆ ಬರಬೇಕಾದವು 500ರ ವರೆಗೂ ಇವೆ. ಇದೆಲ್ಲವನ್ನೂ ನರಿಪಡಿಸಿದರೆ, ನಮ್ಮ ನಮ್ಮಲ್ಲಿ ಅಕ್ಕ ಪಕ್ಕದ ಡಿಸ್ಟ್ರಿಕ್ಟ್ ಬೋರ್ಡುಗಳಿಗಿರುವ ತಾರತಮ್ಯ ಹೋಗಿ ಪರಸ್ಪರ ಪುರೋಭಿವೃದ್ಧಿಗೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಡಿಸ್ಟ್ರಿಕ್ಟ್ ಬೋರ್ಡಿನ ಬದಲಾವಣೆ ಕಾನೂನನ್ನು ತಂದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುತ್ತೀರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ನಮ್ಮಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾದ ಮೇಲೆ ಒಂದು ಸಾರಿಯೂ ಕೂಡ ಚುನಾವಣೆಯಾಗಲಲ್ಲ. ಯಾವ ಪ್ರಜಾಪ್ರಭುತ್ವದ ತತ್ವದ ಪ್ರಕಾರ ಪ್ರಜಾ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವಿರಬೇಕೆಂದು ಭಾವಿಸಿದ್ದೀವೋ ಅದಕ್ಕೆ ವ್ಯತಿರಿಕ್ತವಾಗಿ. . . . .

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ನೀವು ಹಳೆಯ ಮೈಸೂರಿಗೆ refer ಮಾಡುತ್ತಿದ್ದೀರಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಳೆಯದೇನು? ಹೊಸದೇನು? ಆ ರೀತಿ distinction ಮಾಡುವುದೇಕೆ? ಜಿಲ್ಲಾ ಬೋರ್ಡ್ ವಿಚಾರ ಮೈಸೂರು ಸಂಸ್ಥಾನಕ್ಕೆಲ್ಲಾ ಸಂಬಂಧಪಟ್ಟದ್ದು. ಆದ್ದರಿಂದ ನಾನು ಈ ಮಸೂದೆಯನ್ನು ವಿರೋಧಿಸುವುದರಲ್ಲಿ ಸಾಕಷ್ಟು ಕಾರಣಗಳನ್ನು ಕೊಡದೆ ಈ ಮಸೂದೆ ಸರಿಯಲ್ಲವೆಂದು ಒಂದೇ ಮಾತಿನಲ್ಲಿ ಹೇಳಿದರೆ ಹೇಗೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಪ್ರಜಾಪ್ರಭುತ್ವ ಬಂದಮೇಲೆ election ಆಗಿಯೇ ಇಲ್ಲವೆಂದು ಹೇಳಿದರು. South Kanaraದಲ್ಲಿ ಆಗಿದೆಯೆಂದು ನಾನು ಅವರಿಗೆ ತಿಳಿಸಬಯಸುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರು ನಿಮ್ಮ ಕೈಯಲ್ಲಿ ಸಿಕ್ಕಿದ್ದರೆ ಅದೂ ಆಗುತ್ತಿರಲಿಲ್ಲ. ಅವರು ಇನ್ನೂ ಅವರ ಕೈಯಲ್ಲೇ ಇದ್ದರು. ಪ್ರಜಾಪ್ರಭುತ್ವದಲ್ಲಿ ಅವರಿಗೆ ಇನ್ನೂ ನಂಬಿಕೆ ಇದ್ದುದರಿಂದ ಅವರು ಚುನಾವಣೆ ನಡೆಸಿದರು. ನೀವೇ ಇದ್ದಿದ್ದರೆ ಅದನ್ನು ಮಾಡುತ್ತಿರಲಲ್ಲ. ಹಳೆಯ ಮೈಸೂರಿನ ಮಂತ್ರಿಗಳೇ ಪ್ರಜಾಪ್ರಭುತ್ವ ಸ್ಥಾಪನೆಯಾದಮೇಲೆಯೂ ಹೇಗೂ ಮಂತ್ರಿಗಳಾಗಿ ಬಂದಿದ್ದೀರಿ.

ಶ್ರೀಮತಿ ಪುಟ್ಟಸ್ವಾಮಿಯವರೂ ಮತ್ತು ಇತರ ಅನೇಕ ಸದಸ್ಯರೂ ಹೇಳಿದರು, 'ನಾವು ಯಾವಾಗಲೂ ಪ್ರಜಾಪ್ರಭುತ್ವ ತತ್ವಕ್ಕೆ ಒಪ್ಪಿ, ಚುನಾವಣೆಗಳನ್ನು ಜಾಗ್ರತೆ ಮಾಡಬೇಕೆಂತಲೇ ಇದ್ದೆವು; ನಾನಾ ಕಾರಣಗಳು ಬಂದು ನಿಂತುಹೋಯಿತು; ಆದರೆ ಎದರು ಪಾರ್ಟಿಯವರು ನುಮ್ಮನೆ ನಮ್ಮನ್ನು ಹೆದರಿಸುವಂತೆ, ಚುನಾವಣೆಗಳನ್ನು ನಡೆಸಿದರೆ ಕಾಂಗ್ರೆಸ್ ಹೆಚ್ಚಿಗೆ ಜಯಶಾಲಿಯಾಗಿ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ; ಈಗ ಈ ಸಭೆಯ ಸಂಖ್ಯಾಬಲವನ್ನು ನೋಡಿಕೊಂಡರೆ ಕಾಂಗ್ರೆಸ್ಸಿಗೆ ಜನತೆಯ ಬೆಂಬಲವಿದೆಯೇ ಇಲ್ಲವೇ ಎಂಬುದಕ್ಕೆ ಸಾಕ್ಷಿ' ಎಂದು ಹೇಳಿಕೊಂಡು ಬಂದರು. ವಾಸ್ತವವಾಗಿ ಕಾಂಗ್ರೆಸ್ಸಿಗೆ ಚುನಾವಣೆಗಳಲ್ಲಿ ಸಂಪೂರ್ಣ ಬೆಂಬಲವಿದೆಯೇ ಇಲ್ಲವೇ ಎಂಬುದಕ್ಕೆ 1951ರಲ್ಲಿ ನಡೆದ ಚುನಾವಣೆಗಳಲ್ಲಿ ಹಳೆಯ ಮೈಸೂರಿನ ಕಾಂಗ್ರೆಸ್ಸಿನ ಫಲತಾಂಶ ಏನು, ಈಗ 1957ರಲ್ಲಿ ನಡೆದ ಚುನಾವಣೆಗಳಲ್ಲಿ ಹಳೆಯ ಮೈಸೂರಿನ ಭಾಗದ ಕಾಂಗ್ರೆಸ್ಸಿನವರ ಫಲತಾಂಶವೇನು ಎಂಬ ದನ್ನು ಸ್ವಲ್ಪ ಪರಿಶೀಲಿಸಿ ನೋಡಿ. ಆ ಸಂಖ್ಯಾಬಲವನ್ನು ನೋಡಿಕೊಂಡರೆ ಹಳೆಯ ಮೈಸೂರಿನ ಕಾಂಗ್ರೆಸ್ ವಿಷಯದಲ್ಲಿ ಜನತೆಯ ಬೆಂಬಲವೆಷ್ಟರಮಟ್ಟಿಗಿತ್ತೆಂಬುದು ವ್ಯಕ್ತಪಡುತ್ತದೆ. ಈಗೇನೋ integration ಆಗಿ ಹೊರಗಡೆ ಕಾಂಗ್ರೆಸ್ಸಿನ ಸಂಖ್ಯೆ ಜಾಸ್ತಿಯಾಗಿ ಒಟ್ಟಿನಲ್ಲಿ ಈ ಸಭೆಯಲ್ಲಿ ಕಾಂಗ್ರೆಸ್ ಸಂಖ್ಯಾಬಲ ಹೆಚ್ಚಿರಬಹುದು ಅಷ್ಟೆ. ವಾಸ್ತವವಾಗಿ ಹಿಂದೆ ಈ ಬಿಲ್ ತಂದಿದ್ದಾಗ್ಗೆ integration ಆಗಿಯೇ ಇರಲಿಲ್ಲ. ಆದ್ದರಿಂದ ಈ ಪ್ರಕಾರ ಕಾಂಗ್ರೆಸ್ ಸಂಖ್ಯಾಬಲವನ್ನು ಪರಿಗಣಿಸಿದರೆ ಹಿಂದಿನ ಮೈಸೂರು ಕಾಂಗ್ರೆಸ್ಸಿಗೇನೂ ಉತ್ತೇಜಕರವಾದ ಫಲತಾಂಶವಿರುವುದು ಕಂಡು ಬರುವುದಿಲ್ಲ. ಈಗ ಹೊಸ ಮೈಸೂರು ಬಂದಿದೆ; ಜನರು ಒಬ್ಬರನ್ನೊಬ್ಬರನ್ನು ಅರಿತುಕೊಳ್ಳಬೇಕಾದರೆ ಸ್ವಲ್ಪಕಾಲ ಹಿಡಿಯುತ್ತದೆ. ಅಂತು ಈ ಚುನಾವಣೆಯ ಫಲತಾಂಶ ನೋಡಿಕೊಂಡರೆ, ಹೋದ ಚುನಾವಣೆಗಿಂತ ಅರ್ಧಬಲ ಕಾಂಗ್ರೆಸ್ಸಿಗೆ ಕಡಮೆಯಾಗಿದೆಯೆಂಬುದು ಅರ್ಥವಾಗುತ್ತದೆ. ನನಗಾದರೂ ಅರ್ಥವಾಗುವುದಿಲ್ಲ, ಇವರೇಕೆ ಈ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಳಿಗೆ ಹೆದರುತ್ತಾರೆ, ಮಹಾ ಚುನಾವಣೆಗಳಿಗೆ ಅಷ್ಟಾಗಿ ಹೆದುರುವುದಿಲ್ಲ ಎಂಬುದು, ಹಿಂದೆ autocratic ಸರ್ಕಾರವಿದ್ದಾಗ ಯಾವುದೋ ಒಂದು ಬಾರಿ ಡಿಸ್ಟ್ರಿಕ್ಟ್ ಬೋರ್ಡಿಗೆ extension ಕೊಟ್ಟರು. ಆಗ್ಗೆ ಇದೇ ಮಾನ್ಯ ಕಾಂಗ್ರೆಸ್ ಸದಸ್ಯರುಗಳು ಖಡಾಖಂಡಿತವಾಗಿ ವಿರೋಧಿಸಿ ಹಾಗೆಮಾಡಿದ್ದು ಸರಿಯಲ್ಲವೆಂದು ವಾದಿಸಿದರು.

ಅಧ್ಯಕ್ಷರು.—ಹೊಸ ಮೈಸೂರಿನ ವಿಚಾರ ಮಾತ್ರ ಈಗ ಮಾತನಾಡಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಂಥವರು ಈಗ ಹತ್ತು ವರ್ಷಗಳಕಾಲ ಹಳೆಯ ಮೈಸೂರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಜೀವದಾನ ಕೊಟ್ಟಿದ್ದಾರಲ್ಲಾ! ನಾನು ಇದೆಲ್ಲವನ್ನೂ ಹೇಳಿ ಸರಿಮಾಡಿಕೊಂಡು ಹೊಸ ಮೈಸೂರಿನ ವಿಚಾರಕ್ಕೆ ಬರುತ್ತಿದ್ದೇನೆ.

ಅಧ್ಯಕ್ಷರು.—ನಾನು ತಮಗೆ ವಿಷಯಗಳನ್ನು ಸರಿಮಾಡಿಕೊಂಡು ಮಾತನಾಡಬೇಡಿ ಎಂದು ಹೇಳುತ್ತಿಲ್ಲ. ಎಲ್ಲವನ್ನೂ ಹಳೆಯ ಮೈಸೂರಿಗೆ ಸಂಬಂಧಿಸಿದ್ದಂತೆಯೇ ಹೇಳುತ್ತಿದ್ದರೆ ಅಭಾನವಾಗುತ್ತದೆ. General Election ವಿಷಯದಲ್ಲೂ ಹಳೆಯ ಮೈಸೂರೇ, ಡಿಸ್ಟ್ರಿಕ್ಟ್ ಬೋರ್ಡ್ ಎಲೆಕ್ಷನ್ ವಿಚಾರದಲ್ಲೂ ಹಳೆಯ ಮೈಸೂರೇ ಹೇಳುತ್ತಾ ಹೋದರೆ,

(ಅಧ್ಯಕ್ಷರು)

ಚರ್ಚೆಯು ಎಷ್ಟರ ಬಹಳ ನಡೆದಂತಾಗುವುದು. ಆದ್ದರಿಂದ ಬಹಳ ಹೊತ್ತಿನತನಕ ಇದನ್ನೇ ಮಾತನಾಡುವುದು ಸರಿಯಾಗುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಶ್ರೀ ಪುಟ್ಟಸ್ವಾಮಿಯವರು ಮಾತನಾಡುವಾಗ ಒಂದು ಮಾತೂ ಕೂಡ ಅಡದೆ ಸುಮ್ಮನಿದ್ದಿರಿ....

The House adjourned for Lunch at Ten of the Clock and re-assembled at Thirty Minutes past Ten of the Clock.

[MR. SPEAKER in the Chair]

*ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಇದುವರೆಗೆ ಸರ್ಕಾರದವರು ಜಿಲ್ಲಾಬೋರ್ಡುಗಳ ವಿಚಾರದಲ್ಲಿ ತೆಗೆದುಕೊಂಡಿರುವ ನಿಲುವು ಯಾವುದೂ ಕೂಡ ಕರ್ಕಸಿಸ್ಟೆಂಟಾಗಿಲ್ಲ. ಅದನ್ನು ಶ್ರೀಮನ್ಮಹಾರಾಜರವರು 1953ನೆಯ ಇನಪಯಲ್ಲಿ ಈ ರೀತಿಯಾಗಿ ಹೇಳಿದ್ದಾರೆ:

Address of the Maharaja of Mysore on 7th March 1953:

"My Government have decided to hold the elections to the District Boards in accordance with the Act on the recommendation of the Venkatappa Committee. Elections will first be held for the village panchayats and the village panchayats will constitute the electoral colleges for the district boards. My Government feel that the system of indirect elections recommended by the Venkatappa Committee should be given a fair trial. It is hoped that the elections to the district boards will be completed by the end of August 1953."

7ನೇ ಮಾರ್ಚ್ 1953ರಲ್ಲಿ ಶ್ರೀಮನ್ಮಹಾರಾಜರು ಈ ರೀತಿ ತಮ್ಮ ಭಾಷಣದಲ್ಲಿ ತಿಳಿಸಿದರು. 1954ರಲ್ಲಿ ಮುಖ್ಯ ಮಂತ್ರಿಗಳ ಮನಸ್ಸು ಬದಲಾವಣೆಯಾದಾಗ ರಾಜಪ್ರಮುಖರಿದ್ದರು. ಆಗ 11ನೆಯ ಜನವರಿ 1954ರಲ್ಲಿ ರಾಜಪ್ರಮುಖರು ತಮ್ಮ ಭಾಷಣದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ವಿಚಾರವಾಗಿ ಹೀಗೆ ತಿಳಿಸಿದ್ದಾರೆ:

"In my last Address I have expressed the hope that the elections to the district boards would be completed by the end of August 1953. Since then divergent opinions have been expressed in regard to the continuance of the district boards themselves and it has been suggested that the taluk boards should be constituted instead. There was also some difference of opinion regarding the method of election to the boards. As this was a matter requiring thorough examination, my Government have appointed a representative committee under the chairmanship of Sri D. H. Chandrasekharaiya to examine the question and to make recommendations in this connection. As however the present district boards have been in existence for more than six years....."

ಇವೆರಡೂ ಸಹ ಕರ್ಕಸಿಸ್ಟೆಂಟಾಗಿಲ್ಲ. ಈ ದಿವನ ಹೇಳುವುದನ್ನು ನಾಳೆ ಬದಲಾಯಿಸುತ್ತೀರಿ. ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ನಿಮ್ಮ ಬಿಲ್ಲು, ಆರ್ಡಿನೆನ್ಸ್ ಯಾವುದೇ ನೋಡಿದರೂ ನಿಮ್ಮ ನಿಲುವು ಸರಿಯಾಗಿಲ್ಲ, ಯಾವುದನ್ನೂ ನಂಬುವುದಕ್ಕೆ ಸಾಧ್ಯವಿಲ್ಲದಿರುವ ರೀತಿಯಲ್ಲಿ ಹೇಳುತ್ತೀರಿ. "by a period not exceeding two years" ಎಂದು ತಿದ್ದುಪಡಿಯಲ್ಲಿ ಹೇಳಿದ್ದೀರಿ. ಎರಡು ವರ್ಷ ಬೇಕಾಗಿರಲಿಲ್ಲ. ಇಷ್ಟರೊಳಗೇ ನಮ್ಮ ಮಂತ್ರಿಮಂಡಲ ಬೇರೆ ಆಗಬಹುದು, ಬೇರೆ ಕಾಂಗ್ರೆಸ್ ಮಂತ್ರಿಮಂಡಲ ಬರಬಹುದು. ಆ ದಿವನ ಬೇರೊಂದು ಅಭಿಪ್ರಾಯ ಅದಕ್ಕೆ ಬರಬಹುದು. ಸುಮಾರು ಹತ್ತು ವರ್ಷಗಳಿಂದ ಪ್ರತಿವರ್ಷವೂ ಒಂದೊಂದು ನಿಲುವು ಜಿಲ್ಲಾ ಬೋರ್ಡು ಮತ್ತು ಸ್ಥಳೀಯ ಸಂಸ್ಥೆಗಳ ವಿಷಯದಲ್ಲಿ ಸರ್ಕಾರ ತೆಗೆದುಕೊಳ್ಳುವುದು ಸರಿಯಲ್ಲ. ಕೆಲವು ಕಡೆ ಅಡ್ಮಿನಿಸ್ಟ್ರೇಟರಿ ಕಮಿಟಿಮಾಡಿ ಜಿಲ್ಲಾ ಬೋರ್ಡುಗಳನ್ನು ನಸ್ಪೆಂಡ್ ಮಾಡಿದರು. ಈ ಸಂದರ್ಭದಲ್ಲೂ ಕೂಡ ಹಾಗೆಯೇ ಮಾಡಿ ಮೈಸೂರು ಸಂಸ್ಥಾನದಲ್ಲೆಲ್ಲಾ ಒಂದೇಸಾರಿ ಚುನಾವಣೆ ನಡೆಸಬಹುದಾಗಿತ್ತು, ಮಹಾ ಮೈಸೂರಿಗೆ ಸಂಬಂಧಪಟ್ಟಹಾಗೆ ಮಾಡಬಹುದಾಗಿತ್ತು. ನೀವು ಮಾಡುವುದು ನಿಮಗೇ ಅರ್ಥವಾಗುವುದಿಲ್ಲ. ವೆಂಕಟಪ್ಪ ಸಮಿತಿಮಾಡಿ ಹಣ ಖರ್ಚಾಯಿತು, ಚಂದ್ರಶೇಖರಯ್ಯ ಕಮಿಟಿಮಾಡಿ ಹಣ ಖರ್ಚಾಯಿತು. ಈ ಎರಡು ಸಮಿತಿಗಳ ವರದಿಗೂ ಮನ್ನಣೆ ದೊರೆಯಲಿಲ್ಲ. ಈ ಎರಡು ವರದಿಗಳಿಗೂ ಮುಂದೆಹೋಗಿ ಈಗ ಇನ್ನೊಂದು ರೀತಿಯ ತಿದ್ದುಪಡಿಯಿದೆಯೆಂದು ಹೇಳುತ್ತೀರಿ.

ಅಧ್ಯಕ್ಷರು.—ಇದು ಹಳೆಯ ಮೈಸೂರಿಗೆ ಸಂಬಂಧಪಟ್ಟ ಕಥೆ. ಈ ಬಿಲ್ಲು ಹಳೆಯ ಮೈಸೂರಿಗೆ ಸಂಬಂಧಪಟ್ಟಿಲ್ಲ, ಸಂಬಂಧಪಟ್ಟಿದೆಯೆಂದು ತಿಳಿದುಕೊಂಡು ಮಾತನಾಡಬಾರದು. ರೆಫರೆನ್ಸ್ ಮಾಡಬಹುದು. ಹಾಗೆ ಮಾಡುವಾಗ ಹಳೆಯ ಮೈಸೂರಿನ ಸ್ಥಿತಿಗತಿ ಮೇಲೆ ಮಾತನಾಡಿದರೆ ವ್ಯತ್ಯಾಸವಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಬೇರೆ ಜಿಲ್ಲೆಗಳಲ್ಲಿ ಈಗಿರುವ ಹಾಗೆ ಅಡ್ಮಿನಿಸ್ಟ್ರೇಟರಿ ಕಮಿಟಿ ಮಾಡಬಹುದಾಗಿತ್ತು. ಅದನ್ನು ಬೇಡವೆಂದು ನಾವು ವಿರೋಧಿಸಿದ್ದೇವೆ. ಈ ಎರಡು ವರ್ಷ ಅವಧಿ ಹೆಚ್ಚಿಸುವುದಕ್ಕೆ ಬದಲಾಗಿ ಅಡ್ಮಿನಿಸ್ಟ್ರೇಟರಿ ಕಮಿಟಿ ಮಾಡಬಹುದಾಗಿತ್ತು,

ಅವಧಿಮುಗಿದನಂತರ ಜೀವದಾನ ಏಕೆ ಕೊಡುವುದು ? ಪ್ರಜಾಪ್ರಭುತ್ವ ತತ್ವದಮೇಲೆ ಚುನಾವಣೆಮಾಡ ಬೇಕೆಂದಿದ್ದರೆ ಸಮಿತಿ ರಚಿನಬಹುದಾಗಿತ್ತು, ಜೀವ ದಾನ ಕೊಡಬೇಕಾಗಿರಲಿಲ್ಲ. ಸಮಿತಿಮಾಡದೆ ಜೀವ ದಾನ ಕೊಡುವುದರಿಂದ ಒಂದು ಶಂಕೆ ಬರುವುದಕ್ಕೆ ಅವಕಾಶವಾಗಿದೆ. ಬೇರೆ ಕಡೆ ಉಳಿದ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಸಂಸ್ಪೆಂಡ್‌ಮಾಡಿ ಸಮಿತಿಮಾಡಿ ಇಲ್ಲೇಕೆ ಸಮಿತಿ ಮಾಡಲಿಲ್ಲ ? ಹಿಂದೆಯೇ ನಾವು ಈ ವಿಚಾರದಲ್ಲಿ ಪ್ರತಿಬಟಿಸಿದ್ದೇವೆ. ಯಾವುದೋ ರೀತಿಯಲ್ಲಿ ಜನರ ಪ್ರತಿನಿಧಿಗಳಲ್ಲದವರನ್ನು ಈ ಸಮಿತಿ ಗಳಲ್ಲಿ ನೇಮಕಮಾಡಿದ್ದೀರಿ. ಇದರಿಂದ ಚುನಾವಣೆ ಮುಂದಕ್ಕೆ ಹಾಕುವುದಕ್ಕೆ ಅನುಕೂಲವಾಯಿತು. ಕಾಂಗ್ರೆಸ್ಸಿನ ಒಂದು ಬಹುಮತನದನ್ಯತ್ವ ದಕ್ಷಿಣ ಕನ್ನಡದಲ್ಲಿದೆ. ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಜೀವದಾನ ಕೊಡುತ್ತಿದ್ದೀರಿ. ಸಮಿತಿ ಮಾಡಿದರೆ ತೊಂದರೆ ಆಗಬಹುದು ಎಂದು ಜಿಲ್ಲಾ ಬೋರ್ಡನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಇದು ಸುಲಭ ಮಾರ್ಗ ಎಂದು ತಿದ್ದುಪಡಿ ತಂದಿದ್ದೀರಿ. ಇದರ ಜೊತೆಗೆ ಜಿಲ್ಲಾ ಬೋರ್ಡ್‌ಗಳ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ, ಚುನಾವಣೆಗೆ ಖರ್ಚು ಹೆಚ್ಚು, ಆದ್ದರಿಂದ ಈಗ ಚುನಾವಣೆ ಮಾಡುವುದರಿಂದ ಅನಾನುಕೂಲ ವಾಗುತ್ತದೆ ಎಂದು ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ನಾಳೆ ಜನರಲ್ ಎಲೆಕ್ಷನ್‌ನಲ್ಲೂ ಈ ವಾದ ಬರಬಹುದು. ತಮ್ಮ ಪ್ರತಿನಿಧಿಗಳನ್ನು ಉಳಿಸಿಕೊಳ್ಳುವುದಕ್ಕೆ ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ, ಚುನಾವಣೆಗೆ ಕೋಟ್ಯಾಂತರ ರೂಪಾಯಿಗಳಾಗ ಬೇಕು, ಆದ್ದರಿಂದ ಚುನಾವಣೆ ಏಕೆ ಮಾಡಬೇಕು ಎಂದು ವಾದ ಹೂಡಿದರೆ ದೇಶದ ಗತಿಯೇನು ? ನಮ್ಮ ಗತಿಯೇನು ? ಪ್ರಜಾಪ್ರಭುತ್ವದ ಗತಿಯೇನು ? ಇದನ್ನೆಲ್ಲಾ ಯೋಚನೆಮಾಡಿ ಈ ತಿದ್ದುಪಡಿಯನ್ನು ತಾವೆ ಜಿಲ್ಲಾ ಬೋರ್ಡ್ ಅವಧಿಯನ್ನು ಇಲ್ಲಿಗೇ ಮುಗಿಸಬೇಕು. ಬೇಕಾದರೆ ಅಸೆಂಬ್ಲಿ ಮೆಂಬರುಗಳು ಇದ್ದಾರೆ. ಜಿಲ್ಲೆಯ ಅಸೆಂಬ್ಲಿ ಮೆಂಬರುಗಳನ್ನೇ ನೀವು ಈ ಡಿಸ್ಟ್ರಿಕ್ಟ್ ಬೋರ್ಡಿಗೆ, ಚುನಾವಣೆ ಆಗುವ ತನಕ ಚುನಾಯಿತ ಪ್ರತಿನಿಧಿಗಳಾಗಿ ಈ ಕಮಿಟಿಗೆ ನಾಮಿನೇಟ್ ಮಾಡಿರಿ. ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಿ. ಈ ಅನಿರ್ದಿಷ್ಟವಾದ, ಒಂದು ನಿರ್ಧಾರವಿಲ್ಲದ ಅಭಿಪ್ರಾಯವನ್ನು ನಮ್ಮ ಮತ್ತು ಜಿಲ್ಲೆಯಮೇಲೆ ಹೇರಬೇಡಿ. ಇನ್ನು ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಇಷ್ಟು ಹೇಳಿ ನನ್ನ ಭಾಷಣ ವನ್ನು ಮುಗಿಸುತ್ತೇನೆ.

Sri G. VENKATAI GOWDA (Palaiyan).—On a point of order, Sir. Now the Madras District Boards (Mysore Amendment) Bill is under consideration. I submit that the Bill as it stands is not in order. It seeks to replace Ordinance I of 1958 but it is not in conformity with the provisions of the Ordinance since it transgresses the provisions of the Ordinance. As such the Bill placed before the House is not in order.

Sri R. CHENNIGARAMIAH.—The Ordinance was issued for a particular period and not placed before the House for ratification. This Bill is placed before this House to replace the Ordinance. The life of the Ordinance expires on a particular date and this will replace that Ordinance. A Bill need not necessarily be in conformity with the Ordinance or any Ordinance has nothing to do with a Bill. It can differ from the clauses of an Ordinance.

Mr. SPEAKER.—As has been explained by the Hon'ble Minister there is no bar to a Bill going far beyond an Ordinance. Therefore this Bill need not be in terms of the Ordinance. This Bill is intended to replace the Ordinance which will go out of existence within a short time. It is perfectly in order.

Sri C. M. ARUMUGHAM (Kolar Gold Fields.).—Mr. Speaker, much has been said about this small piece of legislation "The Madras District Boards (Mysore Amendment) Bill." But I would like to make a few observations and place them before the House for the ruling party members to consider.

The Hon'ble Minister said that to replace the Ordinance this Bill had been brought. First of all, my humble submission is that the provisions of the Constitution have been violated: Article 213 provides certain powers for the Governor to promulgate an Ordinance at the time of emergency. But if the Hon'ble Minister were to look into the proceedings of the Constituent Assembly, he will come to know that when this question was before the Parliament Government assured that this Article would not be misused. Section 43 of the Government of India Act provides certain powers for the Governor or the Governor General to promulgate such an Ordinance. It empowers the Governor to issue an Ordinance not only during the recess of the Legislature but also when the Legislature is in session.

Mr. SPEAKER.—The Constitution says that an Ordinance can be issued only when the Houses are not in session and any one of the House is Prorogued.

Sri C. M. ARUMUGHAM.—Section 43 of the Government of India Act empowered a Governor to issue an Ordinance when the Legislature was sitting also.

Mr. SPEAKER.—We are now governed by the Constitution.

Sri C. M. ARUMUGHAM.—According to the Constitution the Governor has power to issue an Ordinance during the recess of the Legislature—Article 213. But I am surprised that to extend the term of a small District Board Government are issuing an Ordinance.

Sri R. CHENNIGARAMAIAH.—The Houses were not in session then.

Sri C. M. ARUMUGHAM.—This could have been thought of when the Houses were sitting. I am saying that Government are violating the provisions of the Constitution. There are several instances where I can show that Government have violated the provision of the Constitution which cannot be tolerated. If the Hon'ble Minister were to look into the South Kanara District Board, he will see that there are 52 members and most of them belong to the Congress Party. Now there is a legitimate suspicion to think that Government want their own party men in power even in local bodies. I can say that so many persons feel sorry that the Congress Party is in power. But I am not sorry because the selection of Government is vested in the people. Rightly or wrongly, by foul play, or fair play somehow the Congress Party has been in power.

Sri R. CHENNIGARAMAIAH.—There are not 52 members.

Sri C. M. ARUMUGHAM.—In a democratic way we could have conducted elections. I can show several instances where the Government have used their power to have their own men in local boards, like Municipalities, District Boards. Government are extending the term of this small Board because most of the members are Congressmen. The Hon'ble Minister was a Minister for five years before and for five years he is going to continue. So far he has not brought a Bill in respect of District Boards. I wish to quote only one instance when the father of Mr. Churchill was Finance Minister. During his time the Budget was prepared and placed before him. It was prepared in decimals. He was not able to follow it. Therefore he wrote on the file asking the Financial Secretary why there were dots and to remove the dots and bring a Budget so as to be placed before the sessions. Likewise I can understand.

Sri R. CHENNIGARAMAIAH.—Has he written so on the file ?

Sri C. M. ARUMUGHAM.—Yes.....I can understand the difficulty of the Hon'ble Minister for Local Self-Government in not being able to understand the Acts or to bring a new Act or pilot a Bill before the House (*Laughter*). My submission is that if you are not able to bring a comprehensive Bill, the better thing would be to give chance to others. If it is done you will not only be respecting yourselves but also the Constitution and democracy which is quite absent today in this country. You cannot nominate members to local bodies. Recently you have nominated ten members to the K.G.F. Sanitary Board. After all, the State Government and the Central Government are ruled by one party. You have to follow the practice obtaining in other States, *i.e.*, Madras or any other State. You cannot have your own independent Government in the State as well as your party in the local bodies. Therefore, I submit the Hon'ble Minister may please withdraw the present Bill and bring another Bill making provision to have District Boards within another two years and conduct elections.

ಶ್ರೀ ಆರ್. ಚೆನ್ನಿಗರಾಮಯ್ಯ.—ಅಧ್ಯಕ್ಷರೇ, ಈ ಬಿಲ್ಲಿನಮೇಲೆ ಭಾಷಣ ಮಾಡಿದ ಅನೇಕ ಜನ ಮಾನ್ಯ ಸ್ನೇಹಿತರು ಅವರಿಗೆ ತಿಳಿದಹಾಗೆ ನಾನಾರೀತಿಯ ಟೀಕೆಗಳನ್ನು ಮಾಡಿದ್ದಾರೆ. ಅವರು ಮಾಡಿರತಕ್ಕ ಟೀಕೆಗಳಲ್ಲಿ ಬಹುಭಾಗ ಈ ಬಿಲ್ಲಿಗೆ ಅನ್ವಯಿಸತಕ್ಕ ಟೀಕೆಗಳಲ್ಲ. ಆದರೂ ಸ್ವಲ್ಪಮಟ್ಟಿಗೆ ಈ ಬಿಲ್ಲಿಗೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ. ಈ ವಿಚಾರದಲ್ಲಿ ನಾನು ಚರ್ಚೆಯ ಮಧ್ಯೆ ಸ್ವಲ್ಪ ಪ್ರವೇಶಿಸಿ ಒಂದು ವಿಷಯವನ್ನು ತಿಳಿಸಿದೆ. ಜಿಲ್ಲಾ ಬೋರ್ಡುಗಳ ಅವಧಿಯನ್ನು ಮುಂದಕ್ಕೆ ಹಾಕತಕ್ಕದ್ದು ಸರ್ಕಾರಕ್ಕೇ ಆಗಲೀ, ಸದನ್ಯರಿಗೇ ಆಗಲಿ, ಸಂತೋಷದಾಯಕವಾದ ವಿಚಾರವಲ್ಲ. ಸರ್ಕಾರದವರಾದರೂ ವಿಧಿ ಇಲ್ಲದೆ, ಮನನೊಂದು ಮಾಡಬೇಕಾದಂಥ ಸಂಗತಿಯಾಗಿದೆ. ಈ ರೀತಿ ಇಂಥ ಒಂದು ಮನೂದೆಯನ್ನು ಸಭೆಯ ಮುಂದೆ ತಂದಿದ್ದೇವೆಯೇ ಏನಾ ಸಂತೋಷವಾಗಿ, ತಮಾಷೆಗಾಗಿ ಅಥವ ಬೇಜವಾಬ್ದಾರಿಯಿಂದ ಇದನ್ನು ತಂದಿಲ್ಲವೆನ್ನುವ ಅಂಶವನ್ನು ವ್ಯಕ್ತಪಡಿಸಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವಾಗಿ ಮಾತನಾಡುವಾಗ ಹಳೆಯ ಮೈಸೂರಿನ ಜಿಲ್ಲಾ ಬೋರ್ಡುಗಳ ವಿಚಾರಗಳನ್ನೂ ನಹ ಹೆಚ್ಚಾಗಿ ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿಯೂ ಹಳೆಯ ಮೈಸೂರಿನ ವಿಚಾರದಲ್ಲಿ ಹೇಳಿರತಕ್ಕಂಥ ಸ್ನೇಹಿತರು ಬಹುಮಟ್ಟಿಗೆ ಎಲ್ಲರೂ 1952 ನೇ ಇಸವಿಯಿಂದೀಚೆಗೆ ಇಲ್ಲಿಗೆ ಬಂದಿರುವವರಾಗಿದ್ದಾರೆ. 1952ನೆಯ ಇಸವಿಗಿಂತ ಹಿಂದೆ ಇದ್ದ ವಿಧಾನಸಭೆಯ ಸದಸ್ಯರಿಗೆ ಹಿಂದಿನ ಚರಿತ್ರೆ ಚೆನ್ನಾಗಿ ಗೊತ್ತಿರುತ್ತದೆ. 1952 ನೆಯ ಇಸವಿಯಲ್ಲಿ ಜಿಲ್ಲಾ ಬೋರ್ಡುಗಳ ಕಾನೂನು ಹೊಸದಾಗಿ ಆಗಿದ್ದ ವಿಧಾನಸಭೆಯಲ್ಲಿ ಪಾಸ್ ಆಗಿ ಜಾರಿಗೆ ಬಂದು ಚುನಾವಣೆಗಳನ್ನು ನಡೆಸಬೇಕಾಗಿತ್ತು. 1952ನೇ ಇಸವಿಯಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು, ಆಗ ಚುನಾಯಿತರಾಗಿ ಬಂದ ಹೊಸ ಸದಸ್ಯರುಗಳು ಚುನಾವಣೆಗಳನ್ನು ನಡೆಸಲಿಕ್ಕೆ ಅವಕಾಶ ಕೊಡಲಿಲ್ಲ. ಆ ಕಾನೂನಿನಲ್ಲಿ ನಾನಾ ಮಾರ್ಪಾಡುಗಳನ್ನು ಮಾಡಬೇಕೆಂಬ ಸದಸ್ಯರ ಅಭಿಪ್ರಾಯದಮೇಲೆ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕಾದ ಪ್ರಸಂಗ ಬಂತು. ಆ ಕಾರಣದಿಂದ ಕೆಲವು ಸದಸ್ಯರ ಅಭಿಪ್ರಾಯದಮೇಲೆ ಚಂದ್ರಶೇಖರಯ್ಯ ಸಮಿತಿಯನ್ನು ಮಾಡಿದೆವು. ಅವರ ವರದಿಯೂ ಬಂತು. ಆದರೂ ಕೆಲವು ಕಾರಣಾಂತರಗಳಿಂದ ಚುನಾವಣೆಗಳನ್ನು ನಡೆಸಲಿಕ್ಕೆ ಅವಕಾಶ ಸಿಕ್ಕಲಿಲ್ಲ. ಸರ್ಕಾರದವರು ದುರುದ್ದೇಶದಿಂದಲಾಗಲಿ ಅಥವ ದೌರ್ಜನ್ಯ ಮನೋಭಾವದಿಂದಲಾಗಲಿ ಚುನಾವಣೆಗಳನ್ನು ಮುಂದಕ್ಕೆ ಹಾಕಲಿಲ್ಲವೆಂಬ ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ.

ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಬೋರ್ಡ್‌ಗಳ ವಿಚಾರ ಹೇಳುವುದಾದರೆ ಅಲ್ಲಿ ಚುನಾವಣೆನಡೆದು ಚುನಾಯಿತ ಸದಸ್ಯರಿದ್ದಾರೆ. ಸ್ವಾತಂತ್ರ್ಯ ಬಂದಮೇಲೆ ಜಿಲ್ಲಾ ಬೋರ್ಡುಗಳ ಚುನಾವಣೆಗಳು ನಡೆದಿಲ್ಲವೆಂದು ನಮ್ಮ ಸ್ನೇಹಿತ ರೊಬ್ಬರು ಹೇಳಿದರು. ಹಳೆಯ ಮೈಸೂರಿನಲ್ಲಿ ಚುನಾವಣೆಗಳು ನಡೆದಿಲ್ಲ, ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚುನಾವಣೆಗಳು ನಡೆದಿವೆ. ಚುನಾಯಿತರಾಗಿ ಬಂದಿರುವ ಸದಸ್ಯರೂ ಮತ್ತು ಅಧ್ಯಕ್ಷರೂ ಇವೊತ್ತಿನ ದಿವಸ ಅಲ್ಲಿ ಅಧಿಕಾರ ನಡೆಸುತ್ತಿದ್ದಾರೆ. ಅದರ ಅವಧಿ 1958ನೆ ಇಸವಿ ಅಕ್ಟೋಬರ್ 27ನೆಯ ತಾರೀಖಿಗೆ ಮುಗಿದುಹೋಗುತ್ತದೆ. ಹೊಸ ರಾಜ್ಯವಾದಮೇಲೆ ಎಲ್ಲ ಭಾಗಗಳಿಗೂ ಅನ್ವಯಿಸುವಂತೆ ಒಂದೇ ಕಾನೂನನ್ನು ತರಬೇಕೆಂಬ ಸದುದ್ದೇಶವಿರುವುದರಿಂದ ಈಗ ಈ ಮಸೂದೆಯನ್ನು ತರಲಾಗಿದೆ. ರಾಜ್ಯಕ್ಕೆಲ್ಲ ಒಂದೇ ರೀತಿಯ ಕಾನೂನನ್ನು ತರಲು ನಾನಾ ತೊಂದರೆಗಳಿವೆ. ಐದು ಭಾಗಗಳ ಕಾನೂನನ್ನೂ ಒಂದು ಗೂಡಿಸಿ, ಒಂದು ಯೂನಿಫಾರಂ ಆಗಿ ಮಾಡಬೇಕಾಗಿದೆ. ಅದನ್ನು ಮಾಡಿದನಂತರ ಈ ಸಭೆಯಲ್ಲಿ ಅದು ಪಾಸ್ ಆದನಂತರ ಜಾರಿಗೆ ಕೊಡಬೇಕಾಗಿದ್ದರೆ ಅನೇಕ ಕ್ರಮಗಳನ್ನನುಸರಿಸಬೇಕಾಗುತ್ತದೆ. ಆ ಕಾನೂನು ಪ್ರಕಾರ delimitation of constituencies, electoral rolls ತಯಾರು ಮಾಡಿ ಪಂಚಾಯಿತಿಗೆ ಚುನಾವಣೆಗಳನ್ನು ಮಾಡಬೇಕಾಗುತ್ತದೆ; ಮತ್ತು ಜಿಲ್ಲಾ ಬೋರ್ಡಿಗೂ ಚುನಾವಣೆಗಳನ್ನು ಮಾಡಬೇಕಾಗುತ್ತದೆ. ಇದೆಲ್ಲ ಮನ್ನೂ ಮಾಡಬೇಕಾಗಿದ್ದರೆ ಅಕ್ಟೋಬರ್ ತಿಂಗಳ ಒಳಗಾಗಿ ಸಾಧ್ಯವಿಲ್ಲ. ಎಷ್ಟು ತ್ವರಿತವಾಗಿ ಮಾಡಿದರೂ ಸಹ ಒಂದು, ಒಂದೂವರೆ ವರ್ಷ ಕಾಲ ಬೇಕಾಗುತ್ತದೆ. ಎಲ್ಲ ಕಡೆಗಳಲ್ಲಿಯೂ, ದಕ್ಷಿಣ ಕನ್ನಡ ಜಿಲ್ಲೆ, ಬೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಹಳೆ ಮೈಸೂರು ಈ ಎಲ್ಲ ಭಾಗಗಳಿಗೂ ಒಂದೇ ಕಾನೂನನ್ನು ಅನ್ವಯಿಸಿ ಒಂದೇಕಾಲದಲ್ಲಿ ಚುನಾವಣೆಗಳನ್ನು ನಡೆಸಿ ಒಂದೇಸಲ ಜಿಲ್ಲಾ ಬೋರ್ಡ್‌ಗಳು, ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯಿತಿಗಳು ಜಾರಿಗೆ ಬರುವಂತೆ ಮಾಡಬೇಕು ಎನ್ನುವುದೇ ಮುಖ್ಯ ಉದ್ದೇಶ. ಅದೇರೀತಿಯಲ್ಲಿ ಎಲ್ಲ ಕಡೆಗಳಿಗೂ ಅನ್ವಯಿಸುವಂತೆ ಒಂದು ಕಾನೂನನ್ನು ತಯಾರುಮಾಡಿದ್ದೇವೆ. ಅದನ್ನು ಈ ಸಭೆಯಲ್ಲಿ ಇದೇ ಅಧಿವೇಶನದಲ್ಲಿಯೇ ತಂದು ಸಭೆಯವರ ಒಪ್ಪಿಗೆಯನ್ನು ಪಡೆದು ಆದಷ್ಟು ಬೇಗ ಜಾರಿಗೆ ತರಬೇಕೆಂಬುದೇ ಸರ್ಕಾರದ ಸದುದ್ದೇಶ. ಇದುವರೆಗೂ ಕಾಲಹರಣ ವಾಗಿರುವುದಕ್ಕೆ ಸರ್ಕಾರದ ಜವಾಬ್ದಾರಿಯೂ ಇಲ್ಲ; ಸದಸ್ಯರ ಜವಾಬ್ದಾರಿಯೂ ಇಲ್ಲವೆಂದು ಹೇಳಬೇಕಾಗಿದೆ. ಮೇಲೆ ಹೇಳಿದ ಕಾರಣಗಳಿಗಾಗಿ ಒಂದೇ ರೀತಿಯ ಕಾನೂನನ್ನು ತರುವುದರಲ್ಲಿ ವಿಳಂಬವಾಗಿದೆಯೇ ಹೊರತು ಮತ್ತೇನೂ ಇಲ್ಲ.

ಶ್ರೀಮಾನ್ ಪುಟ್ಟರಾಮಯ್ಯನವರು ಮಾತನಾಡುತ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚುನಾಯಿತರಾದ ಸದಸ್ಯರುಗಳನ್ನು ಅವರ ಅವಧಿಗೆ ಸರಿಯಾಗಿ ವಜಾಮಾಡಿ ನಾಮಕರಣ ಸದಸ್ಯರನ್ನು ಮಾಡಿ ಎನ್ನುವ ಅಭಿಪ್ರಾಯವನ್ನು ಕೊಟ್ಟರು. ಪ್ರಜಾಪ್ರಭುತ್ವ ತತ್ವಗಳನ್ನು ಪರಿಪಾಲನೆ ಮಾಡತಕ್ಕ ಸದಸ್ಯರೇ ಚುನಾವಣೆಗಳನ್ನು ತಪ್ಪಿಸಿ ನಾಮಕರಣ ಸದಸ್ಯರನ್ನು ನೇಮಕಮಾಡಿ ಎಂದು ಒಂದು ವಾದದಲ್ಲಿ ಹೇಳುತ್ತಾರೆ, ಇನ್ನೊಂದು ಕಡೆ ನಾಮಕರಣ ಪದ್ಧತಿಯನ್ನು ತಪ್ಪಿಸಿ ಮೂರು ತಿಂಗಳಿಗಾಗಲಿ, ಆರುತಿಂಗಳಿಗಾಗಲಿ ಚುನಾವಣೆಗಳನ್ನು ನಡೆಸಿ ಎಂದು ಹೇಳುತ್ತಾರೆ. ಹೀಗೆ ಸಮಯಕ್ಕೆ ಮತ್ತು ಸಂದರ್ಭಕ್ಕೆ ಅನುಸಾರವಾಗಿ ಪ್ರಜಾಪ್ರಭುತ್ವದ ತತ್ವಗಳನ್ನು ಹೊಂದಿಸಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ ಎನ್ನತಕ್ಕದ್ದನ್ನು ಸಭೆಯವರ ಪರಿಶೀಲನೆಗೆ ಬಿಟ್ಟಿದ್ದೇನೆ. ಎಲ್ಲೆಲ್ಲಿ ಚುನಾಯಿತ ಸದಸ್ಯರನ್ನೊಳಗೊಂಡ ಜಿಲ್ಲಾ ಬೋರ್ಡು ಕೆಲಸ ಮಾಡುತ್ತಿದೆಯೋ ಅಲ್ಲೆಲ್ಲ ಅದನ್ನೇ ಮುಂದುವರಿಸಿದ್ದೇವೆ. ಬೊಂಬಾಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಚುನಾಯಿತರಾದ ಸದಸ್ಯರಿದ್ದಾರೆ. ಹೊಸ ಕಾನೂನು ಆಗಿ ಎಲ್ಲ ಭಾಗಗಳಿಗೂ ಒಂದೇ ಕಾನೂನು ಜಾರಿಗೆ ಬರುವವರೆಗೂ ಚುನಾಯಿತ ಸದಸ್ಯರನ್ನೇ ಮುಂದುವರಿಸಿಕೊಂಡು ಬಂದಿದ್ದೇವೆ. ಅದೇರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಮುಂದುವರಿಸಿಕೊಂಡು ಹೋಗಬೇಕಾಗಿದೆ. ಬಹುಮಟ್ಟಿಗೆ ಮುಂದಿನ ಮೇ ತಿಂಗಳಿನಲ್ಲಿ ಅಥವ ಜೂನ್ ತಿಂಗಳಿನಲ್ಲಿ ಕಾರ್ಯಕ್ರಮಗಳೆಲ್ಲ ಪೂರೈಸಿದರೆ ಹೊಸ ಕಾನೂನನ್ನು ಜಾರಿಗೆ ತರಲು ಸರ್ವ ಪ್ರಯತ್ನವನ್ನೂ ಮಾಡಬೇಕು ಎಂಬುದೇ ನಮ್ಮ ಉದ್ದೇಶ. ಒಂದುವೇಳೆ ಒಂದೆರಡು ತಿಂಗಳು ವ್ಯತ್ಯಾಸವಾದರೆ ಕಾನೂನಿನಲ್ಲಿ ಅವಕಾಶವಿರಲಿ ಎಂದು ಎರಡುವರ್ಷಕಾಲ ಜಿಲ್ಲಾ ಬೋರ್ಡುಗಳ ಅವಧಿಯನ್ನು ಹೆಚ್ಚಿಸಿ 1959ರ ಅಕ್ಟೋಬರ್‌ವರೆಗೂ ಹೆಚ್ಚು ಮಾಡಬೇಕು ಎಂಬುದೇ ನಮ್ಮ ಉದ್ದೇಶ. ಆದರೆ ಅಷ್ಟು ಕಾಲವನ್ನೂ ತೆಗೆದುಕೊಳ್ಳಬೇಕೆಂಬ ಉದ್ದೇಶ ನಮಗಿಲ್ಲ. ಎಷ್ಟು ಬೇಗ ಸಾಧ್ಯವೋ ಅಷ್ಟುಬೇಗನೆ ಎಲ್ಲ ಕಾರ್ಯಕ್ರಮಗಳನ್ನೂ ಪೂರೈಸಿ ಈಗಿರತಕ್ಕ ಜಿಲ್ಲಾ ಬೋರ್ಡುಗಳನ್ನು ವಜಾಮಾಡಿ ಹೊಸ ಕಾನೂನಿನ ಪ್ರಕಾರ ಚುನಾವಣೆಗಳನ್ನು ನಡೆಸಲಿಕ್ಕೆ ಅವಕಾಶವಿರಲಿ ಎಂದು 'not more than two years' ಎಂದು ಈ ಮಸೂದೆಯಲ್ಲಿ ತಂದಿದ್ದೇವೆ.

(ಶ್ರೀ ಆರ್. ಚೆನ್ನಿಗರಾಮಯ್ಯ)

ಮತ್ತೆ ನಮ್ಮ ಸ್ನೇಹಿತರು ಕೆಲವರು ಆರ್ಡಿನೆನ್ಸ್‌ಗೂ ಮತ್ತು ಬಿಲ್ಲಿಗೂ ವ್ಯತ್ಯಾಸವಿದೆ ಎಂದು ಹೇಳಿದರು. ಅದಕ್ಕೆ ಅಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಆರ್ಡಿನೆನ್ಸ್‌ಗೂ ಮತ್ತು ಈ ಮಸೂದೆಗೂ ಸಂಬಂಧ ವಿಲ್ಲ. ಶ್ರೀಯುತ ಮಲ್ಲಾರಾಧ್ಯರು ಆರ್ಡಿನೆನ್ಸ್ ವಿಚಾರದಲ್ಲಿ ಒಂದಂಶವನ್ನು ವ್ಯಕ್ತಪಡಿಸಿದರು. ಈ ಮಾನ್ಯ ಸಭೆಯ ಅನುಮತಿಯನ್ನು ಪಡೆದು ಒಂದು ಕಾನೂನನ್ನು ಮಾಡುವುದಕ್ಕೆ ಸಾಧ್ಯವಿಲ್ಲದ ಸಂದರ್ಭ ಗಳಲ್ಲಿ ಮಾತ್ರ ಆರ್ಡಿನೆನ್ಸ್ ಮಾಡಬೇಕಾಗುತ್ತದೆ. ಅದಕ್ಕೆ ಒಂದುಕಾಲದ ಮಿತಿಯುಂಟು. ಆರ್ಡಿನೆನ್ಸ್ ಒಂದು ನಿಗದಿಯಾದ ಕಾಲದವರೆಗೆ ಮಾತ್ರ ಜಾರಿಯ ಲ್ಲಿರುತ್ತದೆ. ಅಷ್ಟರಲ್ಲಿ ಬೇರೆ ಒಂದು ಕಾನೂನು ಜಾರಿಗೆ ಬರಬೇಕು. ಆ ದೃಷ್ಟಿಯಿಂದ ಆರ್ಡಿನೆನ್ಸ್‌ಗೆ ಬದಲಾಗಿ ಸಭೆಯ ಅನುಮತಿಯನ್ನು ಪಡೆದು ಈ ಕಾನೂನು ಜಾರಿಗೆ ಬರಬೇಕೆಂಬುದೇ ಉದ್ದೇಶ. ಆದುದರಿಂದ ಅದಕ್ಕೂ ಇದಕ್ಕೂ ಕಾನೂನಿನಲ್ಲಿ ವಿರನ ಬರುವುದಿಲ್ಲವೆಂದು ತಿಳಿಸಬೇಕಾಗಿದೆ.

11 A.M.

ಪಂಚಾಯತಿಗಳ ಚುನಾವಣೆಗಳನ್ನು ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಕೆ ನಡೆಸುತ್ತಿದ್ದೀರಿ ಎಂದು ಶ್ರೀಮಾನ್ ಶ್ರೀನಿವಾಸಶೆಟ್ಟರು ಕೇಳಿದರು. ಇದು ಸ್ವಾಭಾವಿಕ. ಹಿಂದಿನವರ್ಷ ಪಂಚಾಯತಿ ಚುನಾವಣೆ ನಡೆದಿದೆ. ಮದರಾಸು ಮತ್ತು ಬೊಂಬಾಯಿ ರಾಜ್ಯ ಗಳಲ್ಲಿ ನಡೆದಿದೆ. ಹಾಗೆಯೇ ಅಲ್ಲಿಯೂ ನಡೆದಿದೆ. ಇಲ್ಲಿ ಹೊಸ ಕಾನೂನು ಬರುವವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಕೂಡ ನಡಸಬಹುದೆಂದು ಅನೇಕರು ಅಭಿಪ್ರಾಯಪಟ್ಟಿದ್ದರ ಮೇರೆ, ಚುನಾವಣೆ ನಡೆಯಲು ಅವಕಾಶ ಕೊಟ್ಟಿದೆ. ಮೂರು ಅಥವಾ ಆರು ತಿಂಗಳೊಳಗೆ ಇಲ್ಲಿ ಹೊಸ ಕಾನೂನು ಜಾರಿಗೆ ಬಂದು ಅದರಂತೆ ನಡೆಯುವ ಹಾಗಿದ್ದಿದ್ದರೆ ಹೀಗೆ ಮಾಡುತ್ತಿರ ಲಿಲ್ಲ. ಆದರೆ ಇದು ಜಾರಿಗೆ ಬರಬೇಕಾದರೆ ಕೊನೆಯ ಪಕ್ಷ ಒಂದು ವರ್ಷವಾದರೂ ಆಗಬಹುದು. ಆದುದ ರಿಂದ ಅಲ್ಲಿ ಚುನಾವಣೆ ನಡೆಸುವುದಕ್ಕೆ ಅವಕಾಶ ಕೊಟ್ಟಿದ್ದೇವೆ.

Sri J. H. SHAMSUDDIN (Honavar).—On a point of order, Sir. Can an Hon'ble member read newspapers in the House?

Mr. SPEAKER.—No Hon'ble Member is allowed to read newspapers in the House. All Hon'ble Members are expected to be attentive. But whether they are actually attentive or not is a different matter.

Sri J. H. SHAMSUDDIN.—Can they bring newspapers into the House?

Mr. SPEAKER.—But they should not read newspapers. It is a known fact that no Hon'ble Member is allowed to read newspapers in the House.

ಶ್ರೀ ಆರ್. ಚೆನ್ನಿಗರಾಮಯ್ಯ.—ಮುಂದಿನ ಅಧಿ ವೇಶನದಲ್ಲಿ ಈ ಮಸೂದೆಯನ್ನು ತೆಗೆದುಕೊಂಡು ಬಂದು ಕಾನೂನು ಮಂಡಿಸಿ ಜಾರಿಗೆತರುತ್ತೇವೆಂದು ಹಿಂದಿನ ಅಸೆಂಬ್ಲಿ ಅಧಿವೇಶನದಲ್ಲಿ ಹೇಳಿದ್ದೇ ನೆಂದು ಒಬ್ಬರು ಮಿತ್ರರು ಹೇಳಿದರು, ಅದು ನಿಜ. ಆರೀತಿ ಹೇಳಿದುದರಿಂದಲೇ ಈ ಹೊತ್ತು ಅದನ್ನು ಭದ್ರಪಡಿಸಿ ಈ ಅಧಿವೇಶನದಲ್ಲಿ ಮಸೂದೆಯನ್ನು ತಂದು ಕಾನೂನುಮಾಡಿ ಜಾರಿಗೆ ಕೊಡಬೇಕೆಂದು ನರ್ವಪ್ರಯತ್ನವನ್ನೂ ಮಾಡಿದ್ದೇವೆ. ಹಿಂದಿನ ವಾಗ್ದಾನದಂತೆ ನಡೆಸುತ್ತೇವೆಂದು ಹೇಳುತ್ತೇನೆ.

ಡಿಸ್ಟ್ರಿಕ್ಟ್ ಬೋರ್ಡುಗಳ ಆರ್ಥಿಕ ಪರಿಸ್ಥಿತಿಯ ವಿಚಾರ ಹೇಗಿದೆ ಎಂಬುದನ್ನು ಶ್ರೀಮಾನ್ ಲಿಂಗಾ ರೆಡ್ಡಿಯವರು ಹೇಳಿದರು. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ವಿಚಾರ ಹೇಳುತ್ತೇನೆ. ಕೊಳ್ಳೇಗಾಲ ಹಿಂದೆ ಕೊಯಮತ್ತೂರು ಜಿಲ್ಲೆಗೆ ಸೇರಿತ್ತು, ಈಗ ಮೈಸೂರು ಜಿಲ್ಲೆಗೆ ಸೇರಿದೆ. ಅದರ ಲೇಣಿ-ದೇಣಿ ಗಳು (assets and liabilities) ಹೇಗೆ ಹಂಚಿಕೆ ಯಾಗಬೇಕೆಂದು ಈ ಹೊತ್ತಿನವರೆಗೂ ತೀರ್ಮಾನ ವಾಗಿಲ್ಲ. ಮುಂದೆ ಒಂದೇ ಕಾನೂನು ನಂಜನಗೂ ದ್ಯಂತ ಜಾರಿಗೆ ಬಂದಾಗ ಚುನಾವಣೆ ನಡೆಸಬೇಕಾ ಗಿದೆ. ಈ ಕಾರಣದಿಂದ ವಿಳಂಬವಾಗಿದೆ. ನಾವು ಹೇಳುವುದನ್ನು ನಂಬುವುದಿಲ್ಲವೆಂದು ಶ್ರೀಮಾನ್ ಪುಟ್ಟರಾಮಯ್ಯನವರು ಹೇಳುತ್ತಾರೆ. ನಂಬಿಕೆ ಯಿಲ್ಲದಿದ್ದರೆ ನಿಜಸ್ಥಿತಿ ಗೊತ್ತಾಗುವುದೇ ಇಲ್ಲ. ಪ್ರಜಾಪ್ರಭುತ್ವ ಎಂದು ಹೇಳುತ್ತಿದ್ದೇವೆ. Brutal majority, steam-roller majority ಎಂದು ಎಲ್ಲ ಪದಗಳನ್ನು ಅವರು ಉಪಯೋಗಿಸುತ್ತಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಅದೆಲ್ಲಾ ನಿಜ.

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀಮಾನ್ ಮಲ್ಲಾರಾಧ್ಯರಂಥವರು ಹೀಗೆ ಹೇಳುವುದು ಆಶ್ಚರ್ಯ! ಇದೇ ಕಾಂಗ್ರೆಸ್ ಸರ್ಕಾರದಲ್ಲಿ ದಕ್ಷತೆ ಯಿಂದ ಕೆಲಸಮಾಡಿ ನಿವೃತ್ತರಾಗಿರುವವರು ಕಾಂಗ್ರೆಸ್ ಸರ್ಕಾರ ಹಾಕಿರುವ ನೀತಿಯಲ್ಲಿ ಸ್ವಲ್ಪ ಮಟ್ಟಿಗೆ ನಂಬಿಕೆ ಇಟ್ಟಿದ್ದಾರೆಂದು ನಾನು ತಿಳಿದು ಕೊಂಡಿದ್ದೆ.

Sri J. B. MALLARADHYA.—Sir, I would like to clarify. I never said that I do not respect Government. Even today I respect any institution called Government. I have served Government for 35 years and I have never said that I have no belief in the institution called Government. It is a misapprehension to say that I have no respect for Government. I respect the institution of Government whatever be the Government.

Sri R. CHENNIGARAMAIAH.—Sri Mallaradhya served the Congress Government for about ten years and I thought he has developed a love and liking to the Government.....

Sri J. B. MALLARADHYA.—Not for the Congress Government. Even during my term of service, I have shown my disapproval against so many policies.....

Sri R. CHENNIGARAMAIAH.—After retirement, I thought he would.....

Mr. SPEAKER.—Hon'ble Member Sri Mallaradhya is on the opposition bench.

Sri R. CHENNIGARAMAIAH.—That is an unfortunate thing. I never expected that.

Sri Mallaradhya also said, while speaking about democratic principles, the steam-roller and brutal majority. In any Democracy it is the steam-roller or brutal majority that can dictate policies of Government and not the boneless minority.

Sri J. B. MALLARADHYA.—We only said brute majority and not brutal majority.

Sri R. CHENNIGARAMAIAH.—It is a qualified term. It is the majority that can dictate policies of Government and not the minority. The minority cannot run a Government. It is nothing strange in this country. It is the majority that dictates policies. Therefore when people begin to respect Democracy, they must also respect democratic principles. It is the majority party that dictates policies to the Government and not the minority.

An HON'BLE MEMBER.—The majority must rule all the people in a democracy.

Sri R. CHENNIGARAMAIAH.—There is the electorate who decide the fate of the parties.

Sri C. M. ARUMUGHAM.—In the next general elections we will see.

Sri R. CHENNIGARAMAIAH.—After independence, two elections have been decided.

Sri J. B. MALLARADHYA.—It is a story by itself.

Sri R. CHENNIGARAMAIAH.—It is a story by itself on both sides. It is all side talk.

Sri C. J. MUCKANNAPPA.—I rise to a point of order. What is the special privilege vested in the Minister? He was speaking in Kannada. But in no time, he switched on to English. I am bringing this to the notice of the Chair.

Mr. SPEAKER.—When a speech starts in one language, it should be continued in the same language and finished in the same language. That is the rule. Sometimes, Hon'ble Members become emotional and in that emotional mood they express themselves in English.

ಶ್ರೀ ಆರ್. ಚೆನ್ನಿಗರಾಮಯ್ಯ.—ಇದುವರೆಗೆ ನಾನು ಹೇಳಿರುವ ಅಂಶಗಳು ಬಹಳ ಮಟ್ಟಿಗೆ ಮಾನ್ಯ ಸದಸ್ಯರಿಗೆ ಅರ್ಥವಾಗಿದೆ ಎಂದು ಕಾಣುತ್ತದೆ. ಈ ದೃಷ್ಟಿಯಿಂದ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟು ಅವರಲ್ಲಿರುವ ಅಪನಂಬಿಕೆಯನ್ನು ಹೋಗಲಾಡಿಸಿ ಕೊಂಡು ನಂಬಿಕೆಯನ್ನು ಮೂಡಿಸಿಕೊಳ್ಳಬೇಕು. ಇದೇ ವರ್ಷ ಸರ್ಕಾರದವರು ಒಂದು ಕಾನೂನನ್ನು ಅದಷ್ಟು ಬೇಗ ಜಾರಿಗೆ ಕೊಡುತ್ತಾರೆಂಬ ನಂಬಿಕೆಯನ್ನಿಟ್ಟು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Before I put the Bill to the House, I want to make one point clear—not about the Bill. About the reading of newspapers on which there was some reference, there was an instance in Bombay. One of the Hon'ble Ministers was reading a newspaper. A point of order was raised that the Hon'ble Minister was reading. That day I was presiding and I said that newspapers should not be read in the House and that no Hon'ble Member was allowed to read newspapers in the House. Suddenly the Minister got up and said that it formed part of his file. Then I said that he could read it, but not conspicuously.

The question is :

"That the Madras District Boards (Mysore Amendment) Bill, 1958, be taken into consideration."

The motion was adopted.

Mr. SPEAKER.—I will put all the clauses together as there are no amendments. The question is :

"That Clauses 1, 2 and 3 and the Title and the Preamble stand part of the Bill."

The motion was adopted.

Clauses 1, 2 and 3 and the Title and the Preamble were added to the Bill.

Motion to pass.

Sri R. CHENNIGARAMAIAH.—Sir, I beg to move :

"That the Madras District Boards (Mysore Amendment) Bill, 1958, be passed."

Mr. SPEAKER.—The question is :

"That the Madras District Boards (Mysore Amendment) Bill, 1958, be passed."

The motion was adopted.

Business of the House.

Sri M. C. NARASIMHAN (Kolar Gold Fields).—I would like to know if the Bills that are put down on the Order paper will be taken up now.

Mr. SPEAKER.—We are now taking up the Mysore Forest Laws (Amendment) Bill.

Sri J. B. MALLARADHYA (Nanjangud).—Sir, as the Bills that are put down on the Order paper are being changed from time to time, it becomes very difficult for us to come prepared; and even for sending amendments an interval of three days is required. It is very difficult if they are changed from time to time.

Mr. SPEAKER.—I am not aware of that. Of course the Order paper is prepared much earlier. Even there if any Bill is not concluded, it is mentioned in the order paper 'if not concluded.'

Sri J. B. MALLARADHYA.—This was not the order in which it was put down originally, Sir.

Mr. SPEAKER.—When we distribute the agenda before 5'clock, some difficulty sometimes may arise. That is why the Hon'ble Member may be feeling some difficulty. Actually, no difficulty need be felt at all.

Sri M. C. NARASIMHAN.—Is it not necessary that at least three days notice in respect of Bills is given, Sir? In respect of certain Bills three days are not allowed.

Mr. SPEAKER.—I do admit that in respect of Bills three days' notice is necessary. But these are small Bills. That is why we may not insist on three days' notice. That is why in the case of these small bills, I have relaxed the notice period.

MYSORE FOREST LAWS (AMENDMENT) BILL, 1958.

Motion to consider.

Sri H. S. RUDRAPPA (Minister for Agriculture).—Sir, I beg to move:

"That the Mysore Forest Laws (Amendment) Bill, 1958, be taken into consideration."

Mr. SPEAKER.—Motion moved:

"That the Mysore Forest Laws (Amendment) Bill, 1958, be taken into consideration."

Before we proceed, I would like to bring to the notice of the Hon'ble Members that the time allotted to this subject in the Business Advisory Committee is one hour.

*Sri H. S. RUDRAPPA.—Sir, I only wish to say that this is a simple measure and it is not of a controversial nature. Under the existing law, it was not possible to meet the situation so far as smuggling sandalwood is concerned. Therefore the number of cases also was on the increase. Therefore, we had to pass ordinance to meet the situation then. And that ordinance is being replaced by this Bill.

There are three points which have been mentioned in the Bill, Sir. There was some lacuna because they had only mentioned 'carts'. There was not provision to meet smuggling carried on by means of quicker vehicles of transport such as cars and lorries. Therefore, we had to substitute the word 'vehicle' in place of 'carts'.

The second provision is that the police officer or a forest officer had no power to stop any lorry if he suspects that a particular lorry carries smuggled sandalwood. Therefore, we had to make provision to empower forest officers and police officers to stop whenever they felt that a particular vehicle was carrying smuggled sandalwood.

The third point is that, under the present law, the penalty inflicted was not sufficient to deter people from committing offiences in connection with sandalwood. Therefore, we have inserted a clause which enhances the punishments up to one year and fine which may extend to Rs. 1,000.

These are the three provisions that have now been sought to be included in the present law on the subject by means of the Bill placed before the House, and I hope that all the Hon'ble Members who are as jealous as myself and Government in safeguarding Government property, will kindly extend their wholehearted support to this Bill.